# ದಿವಾಣಿ ನ್ಯಾಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಿತ್ತೂರ

ದಿನಾಂಕಃ 16.06.2026 ರಂದು ಪಿ.ಡಬ್ಲ್ಯೂ-3 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಕೆ ಎನ್ ಎಸ್/ ಎಸ್ ಡಿ ಬಿ ವಕೀಲರಿಂದಃ**

1. ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ವಾದಿಯವರು ನನ್ನ ಸಂಬಂಧಿಕರು. ಪ್ರತಿವಾದಿಯವರು 3 ಗುಂಟೆ 12 ಅಣೆ ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತಾರೆ. 1 ನೇ ಪ್ರತಿವಾದಿ 1 ಗುಂಟೆ 15 ಅಣೆ, 2 ನೇ ಪ್ರತಿವಾದಿ 3 ಗುಂಟೆ 12 ಅಣೆ, 3 ನೇ ಪ್ರತಿವಾದಿ 3 ಗುಂಟೆ 12 ಅಣೆ ದಾವಾ ಆಸ್ತಿಯನ್ನು ಅತೀಕ್ರಮಣ ಮಾಡಿರುತ್ತಾರೆ. ಭೂಮಾಪನ ಇಲಾಖೆಯವರು ಜಮೀನು ಅಳತೆ ಮಾಡುವಾಗ ನಾನು ಹಾಜರು ಇದ್ದೆ, ಆದ್ದರಿಂದ ಸದರಿ ಆಧಾರವಾಗಿ ಸದರಿ ಅತೀಕ್ರಮಣದ ವಿಸ್ತೀರ್ಣಗಳನ್ನು ಹೇಳುತ್ತಿದ್ದೇನೆ. ಭೂಮಾಪನ ಇಲಾಖೆಯವರ ಹೆಸರು ಹೇಳಲು ಬರುವುದಿಲ್ಲ. ಸದರಿ ಇಲಾಖೆಯವರು ಬೈಲಹೊಂಗಲದಿಂದ ಬಂದಿರುತ್ತಾರೆ. ವಾದಿಯವರು ನನ್ನ ಸಂಬಂಧಿಕರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ವಾದಿಯವರು ಎಷ್ಟು ಜಮೀನು ಶಾಲೆಗೆ ದಾನ ಮಾಡಿದ್ದರು ಎಂದು ಗೊತ್ತಿಲ್ಲ. ವಾದಿಯವರ ಗಂಡ 2014 ರಲ್ಲಿ ದಾವಾ ಆಸ್ತಿಯ ಐಟಮ ನಂಬರ 1 ನ್ನು ದಾನ ಕೊಟ್ಟ ಬಗ್ಗೆ ದಾಖಲೆ ನೋಡಿಲ್ಲ. ವಾದಿ ದೇಶಪಾಂಡೆಯವರಿಂದ ಎಷ್ಟು

ಎಕರೆ ಜಮೀನನ್ನು ಖರೀದಿ ಮಾಡಿದ್ದಾರೆ ಎಂದು ಮಾಹಿತಿ ಇಲ್ಲ. ಸರ್ವೆ ನಂಬರ 78/6 ರಲ್ಲಿ ವಾದಿ ಅತೀಕ್ರಮಣ ಮಾಡಿದ ಬಗ್ಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಾಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕಿತ್ತೂರ.